8

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ

ಜಗದ್ಗುರು ಡಾ|| ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು–570 004

ವಿಭಾಗ ಕನ್ನಡ [ಪದವಿ ಶ್ರೀ ವಿಜ.]

೨೧·೦೨-೨೦೨೨

20 – 20

ವಿಷಯ : ಮಾತೃ ಭಾಷಾ ದಿವಸದ ಆಚರಣೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ವರದಿ.

Celebration of Mathru Bhasha Divas Programme Inaugurated

**JSS ENTERPRISES**

**JSS Public School Campus**

**Dr. RadhaKrishna Nagara**

**Teachers Layout, Mysuru-570 029**

ಮಾತೃ ಭಾಷಾ ದಿವಸದ ಆಚರಣೆ ಕಾರ್ಯಕ್ರಮದ ಉದ್ಘಾಟನೆ.

Celebration of Mathru Bhasha Divas Programme

21·02·2022



ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –೫೭೦೦೨೫
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರತಿಷ್ಠಿತ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ ೨೧.೦೨.೨೦೨೨

## ಪ್ರಕಟಣೆಯ ಕೃಪೆಗಾಗಿ

## ಭಾರತೀಯ ಭಾಷೆಗಳೆಲ್ಲವೂ ಭಾರತೀಯ ಸಂಸ್ಕೃತಿಯ ಪ್ರತೀಕ.

– ಪ್ರೊ. ಬಿ.ವಿ.ಸಾಂಬಶಿವಯ್ಯ

"ಬಹುಭಾಷೆ ಮತ್ತು ಬಹುಸಂಸ್ಕೃತಿ ಭಾರತದ ಪರಂಪರೆಯ ಗುರುತಾಗಿದೆ. ೧೯೯೯ರಲ್ಲಿ ವಿಶ್ವಸಂಸ್ಥೆ ಮತ್ತು ಯುನೆಸ್ಕೊ ಮಾತೃಭಾಷಾ ವರ್ಷವನ್ನು ಆಚರಿಸಲು ತಿಳಿಸಿತು. ೧೯೫೨ರಲ್ಲಿ ಬಾಂಗ್ಲಾದೇಶದಲ್ಲಿ ಬಾಂಗ್ಲಾ ಭಾಷೆಯನ್ನು ದೇಶಭಾಷೆಯಾಗಬೇಕೆಂದು ಹೋರಾಟ ಮಾಡಿ ಪ್ರಾಣವನ್ನು ಅರ್ಪಿಸಿದ ನೆನಪಿನಲ್ಲಿ ಈ ದಿನವನ್ನು ಮಾತೃಭಾಷಾ ದಿನವೆಂದು ಗುರುತಿಸಲಾಗಿದೆ. ಭಾಷೆ ಎಂಬುದು ಆಲೋಚನೆ-ಅಭಿಪ್ರಾಯಗಳ ಅಭಿವ್ಯಕ್ತಿಯ ಮಾಧ್ಯಮ. ಮಾತೃವಿನ ಮೂಲಕ ಮಗು ಭಾಷೆಯನ್ನು ಕಲಿಯುತ್ತದೆ. ಇಂದಿನ ಸಂದರ್ಭದಲ್ಲಿ ಮಾತೃಭಾಷೆ ಮತ್ತು ವ್ಯವಹಾರಿಕ ಭಾಷೆಯನ್ನು ಒಂದಾಗಿ ಕೊಂಡುಯ್ಯುವುದು ಒಂದು ಕಲೆ. ಮಾತೃಭಾಷೆಯನ್ನು ಉಳಿಸಬೇಕೆಂದರೆ ಅವಕಾಶ ಸಿಕ್ಕಾಗಲೆಲ್ಲಾ ಮಾತೃಭಾಷೆಯನ್ನು ಹೆಚ್ಚಾಗಿ ಬಳಸಬೇಕು. ಇದರಿಂದ ಸಂಸ್ಕೃತಿಯೂ ಕೂಡ ಬೆಳೆಯುತ್ತದೆ." ಎಂದು ಪ್ರೊ. ಬಿ.ವಿ.ಸಾಂಬಶಿವಯ್ಯನವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸೆಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಾತೃಭಾಷಾ ದಿವಸ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ, ಕಾಲೇಜಿನ ಮುಖ್ಯಕಾರ್ಯನಿರ್ವಾಹಕರಾದ ಪ್ರೊ. ಬಿ. ವಿ. ಸಾಂಬಶಿವಯ್ಯನವರು ಮಾತನಾಡುತ್ತಾ "ಪ್ರಪಂಚದಲ್ಲಿ ಏಳು ಸಾವಿರ ಭಾಷೆಗಳಿವೆ. ಭಾರತೀಯ ಭಾಷೆಗಳೆಲ್ಲವೂ ಭಾರತೀಯ ಸಂಸ್ಕೃತಿಯ ಪ್ರತೀಕ. ಭಾಷೆಗಳನ್ನಾಡುವವರು ಭ್ರಾತೃತ್ವದಿಂದ ನಡೆದುಕೊಳ್ಳಬೇಕು. ಪ್ರಾದೇಶಿಕ ಐತಿಹ್ಯಗಳು, ಮಹಾತ್ಮರ ಚರಿತ್ರೆ, ಪರಂಪರೆ, ಭಾಷಾ ವಿಶೇಷತೆಗಳು ಆಯಾ ಪ್ರದೇಶದ ವೈಶಿಷ್ಟ್ಯವಾಗಿವೆ. ಇವುಗಳ ಆಯಾ ಪ್ರದೇಶದ ಮಾತೃಭಾಷೆಯ ಮೂಲಕವೇ ಲಭ್ಯವಾಗುತ್ತವೆ. ನಾವು ಎಲ್ಲಾ ಭಾಷೆಗಳಿಗೂ ಆದ್ಯತೆಯನ್ನು ನೀಡಿ ಬಳಸಿ ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ" ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ ಹೊನ್ನಪ್ಪನವರು ಮಾತನಾಡುತ್ತಾ "ಮಾತೃಭಾಷೆ ದಿವಸವನ್ನು ಆಚರಿಸುವುದು ಬಹುತ್ವದ ಭಾರತದಲ್ಲಿ ಬಹುಮುಖ್ಯವಾಗಿದೆ. ಅದನ್ನು ಇಂದು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಇದನ್ನು ಪ್ರತಿವರ್ಷವು ಇದೇ ರೀತಿ ಅರ್ಥಪೂರ್ಣವಾಗಿ ಆಚರಿಸಬೇಕು' ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ವಿಧ್ಯಾರ್ಥಿಗಳು ಮಾತೃಭಾಷಾ ದಿವಸ ಕಾರ್ಯಕ್ರಮದಲ್ಲಿ ಭಾಗವಹಿಸಿ ತಾವು ಬಿಡಿಸಿದ ೧೫ ಚಿತ್ರಗಳನ್ನು ಪ್ರದರ್ಶಿಸಿದರು. ಇದರಲ್ಲಿ ಭಾರತೀಯ ಮಾತೃಭಾಷೆಗಳ ಬಹುಸಂಸ್ಕೃತಿಯ ವೈವಿಧ್ಯತೆ ಪ್ರಧಾನವಾಗಿ ತೋರುತ್ತಿತ್ತು. ತಮ್ಮ ತಮ್ಮ ಮಾತೃಭಾಷೆಯನ್ನು ಪ್ರತಿನಿಧಿಸುವ ಹಿನ್ನೆಲೆಯಲ್ಲಿ ಕನ್ನಡ, ಮಣಿಪುರಿ, ಮಲೆಯಾಳಂ, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿನ ಜನಪದ, ಭಾವಗೀತೆ ಮತ್ತು ದೇಶಭಕ್ತಿ ಗೀತೆಗಳನ್ನು ಹಾಡಿದರು.

ಡಾ. ಬಿ.ಎಸ್. ಸುದೀಪ್ ಪ್ರಾಸ್ತಾವಿಕ ನುಡಿಗಳೊಂದಿಗೆ ಎಲ್ಲರನ್ನು ಸ್ವಾಗತಿಸಿದರು. ವಿದ್ಯಾರ್ಥಿನಿ ಕು. ಸಂಧ್ಯಾ ಪ್ರಾರ್ಥಿಸಿದರು. ಕು. ಅನನ್ಯ ಆರ್.ವಿ ನಿರೂಪಿಸಿದರು. ಕು. ಭವ್ಯಶ್ರೀ ವಂದಿಸಿದರು. ಕಾರ್ಯಕ್ರಮದ ಸಂಚಾಲಕರಾದ ಡಾ. ಮಹೇಶ್ವರಿ ಎನ್ ಉಪಸ್ಥಿತರಿದ್ದರು.

ಗೆ,

ಸಂಪಾದಕರು

------------------

ಪ್ರಾಂಶುಪಾಲರು

21/2

(ಡಾ. ಹೆಚ್.ಸಿ. ಹೊನ್ನಪ್ಪ)

**ಪ್ರಾಂಶುಪಾಲರು**
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
**ಊಟಿ ರಸ್ತೆ, ಮೈಸೂರು–25**

ವಿಜಯ ಕರ್ನಾಟಕ 22-02-2022

# ಊಟಿ ರಸ್ತೆ ಜೆಎಸ್‌ಎಸ್ ಕಾಲೇಜಿನಲ್ಲಿ ಮಾತೃಭಾಷೆ ದಿನಾಚರಣೆ ಕಾರ್ಯಕ್ರಮ

**ವಿಕ ಸುದ್ದಿಲೋಕ** ಮೈಸೂರು

ಭಾಷೆಯನ್ನು ಉಳಿಸಬೇಕೆಂದರೆ ಅವಕಾಶ ಸಿಕ್ಕಾಗಲೆಲ್ಲಾ ಮಾತೃಭಾಷೆ ಹೆಚ್ಚಾಗಿ ಬಳಸಬೇಕು. ಇದರಿಂದ ಸಂಸ್ಕೃತಿಯೂ ಬೆಳೆಯುತ್ತದೆ ಎಂದು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಅಭಿಪ್ರಾಯಪಟ್ಟರು.

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಾತೃಭಾಷಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಬಹುಭಾಷೆ ಮತ್ತು ಬಹು ಸಂಸ್ಕೃತಿ ಭಾರತದ ಪರಂಪರೆ ಗುರುತು. 1999ರಲ್ಲಿ ವಿಶ್ವಸಂಸ್ಥೆ ಮತ್ತು ಯುನೆಸ್ಕೊ ಮಾತೃಭಾಷಾ ವರ್ಷವನ್ನು ಆಚರಿಸಲು ತಿಳಿಸಿತು. 1952ರಲ್ಲಿ ಬಾಂಗ್ಲಾದೇಶದಲ್ಲಿ ಬಾಂಗ್ಲಾ ಭಾಷೆಯನ್ನು ದೇಶಭಾಷೆಯಾಗಬೇಕೆಂದು ಹೋರಾಟ ಮಾಡಿ ಪ್ರಾಣವನ್ನು ಅರ್ಪಿಸಿದ ನೆನಪಿನಲ್ಲಿ ಈ ದಿನವನ್ನು ಮಾತೃಭಾಷಾ ದಿನವೆಂದು ಗುರುತಿಸಲಾಗಿದೆ. ಭಾಷೆ ಎಂಬುದು ಆಲೋಚನೆ-ಅಭಿಪ್ರಾಯಗಳ ಅಭಿವ್ಯಕ್ತಿಯ ಮಾಧ್ಯಮ. ಮಾತೃವಿನ ಮೂಲಕ ಮಗು ಭಾಷೆಯನ್ನು ಕಲಿಯುತ್ತದೆ. ಇಂದಿನ ಸಂದರ್ಭದಲ್ಲಿ ಮಾತೃಭಾಷೆ ಮತ್ತು ವ್ಯವಹಾರಿಕ ಭಾಷೆಯನ್ನು ಒಂದಾಗಿ ಕೊಂಡುಯ್ಯುವುದು ಒಂದು ಕಲೆ,'' ಎಂದು ಹೇಳಿದರು.

ಪ್ರಾಂಶುಪಾಲಡಾ. ಎಚ್. ಸಿ ಹೊನ್ನಪ್ಪ ಮಾತನಾಡಿ, ''ಮಾತೃಭಾಷೆ ದಿವಸವನ್ನು ಆಚರಿಸುವುದು ಬಹುತ್ವದ ಭಾರತದಲ್ಲಿ ಬಹುಮುಖ್ಯವಾಗಿದೆ,'' ಎಂದರು.

ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು ಚಿತ್ರಗಳನ್ನು ಪ್ರದರ್ಶಿಸಿದರು. ಕನ್ನಡ, ಮಣಿಪುರಿ, ಮಲೆಯಾಳಂ, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿನ ಜನಪದ, ಭಾವಗೀತೆ ಮತ್ತು ದೇಶಭಕ್ತಿ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದ ಸಂಚಾಲಕರಾದ ಡಾ. ಮಹೇಶ್ವರಿ ಉಪಸ್ಥಿತರಿದ್ದರು.




ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮಾತೃಭಾಷಾ ದಿನಾಚರಣೆ ಕಾರ್ಯಕ್ರಮ ನಡೆಯಿತು.